By Regd post "ACK" Due

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ:ಸಿಬ್ಬಂದಿ-1/ವಿಚಾರಣೆ-1/31/2014-15

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ: 28.03.2015.

## ನಿಯಮ 12 ರಡಿಯಲ್ಲಿ ಕಾರಣ ಕೇಳುವ ಸೂಚನಾ ಪತ್ರ

ವಿಷಯ:-2013-14ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿನ ಕಂಬೈನ್ಡ್ ಹಾರ್ವೆಸ್ಟರ್ ಉಪಕರಣಗಳಿಗೆ ಸಹಾಯ ಧನ ನೀಡುವ ಕುರಿತು.

ಉಲ್ಲೇಖ:-1.ನಿಮ್ಮ ಪತ್ರ ಸಂ:ತಾಂತ್ರಿಕ-3/13/ಕೃಯಾಂಯೋ/2014-15 ದಿನಾಂಕ: 17.07.2014.

2.ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಯವರ ಪತ್ರ ಸಂ:ಕೃಸ/ಆಕಾ/428/2014, ದಿ: 19.03.2015.

******

ಉಲ್ಲೇಖಿತ ನಿಮ್ಮ ಪತ್ರದಲ್ಲಿ, 2013-14ನೇ ಸಾಲಿನಲ್ಲಿ ಎಂ.ಜಿ.ಆಟೋಸರ್ವೀಸ್, ಬಳ್ಳಾರಿ ಇವರು ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 37 ಕಂಬೈನ್ಡ್ ಹಾರ್ವೆಸ್ಟರ್ ಉಪಕರಣಗಳನ್ನು ಸೆಪ್ಟೆಂಬರ್-2013 ರಿಂದ ಮಾರ್ಚ್-2014ರವರೆಗೆ ಬ್ಯಾಂಕ್ ಸಾಲದ ಮೂಲಕ ರೈತರಿಗೆ ವಿತರಿಸಿರುವುದಾಗಿ ಕೋರಿ ಪತ್ರ ಬರೆದಿರುತ್ತಾರೆ ಎಂದು ತಿಳಿಸಿರುತ್ತೀರಿ.

ಕೃಷಿ ಇಲಾಖೆಯ ಮಾರ್ಗಸೂಚಿಗಳನ್ವಯ ರೈತರು ಯಾವುದೇ ಕೃಷಿ ಉಪಕರಣ ಖರೀದಿಸುವ ಮುನ್ನ ರೈತ ಸಂಪರ್ಕ ಕೇಂದ್ರ/ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಪೂರ್ವಾನುಮತಿ ಪಡೆದು ಖರೀದಿಸುವುದು ಆವಶ್ಯವಿರುತ್ತದೆ ಎಂದು ತಿಳಿಸುತ್ತೀರಿ. ದಾವಣಗೆರೆ ಜಿಲ್ಲೆಯಲ್ಲಿ ಈ ಉಪಕರಣಗಳನ್ನು ಇಲಾಖೆಯ ಮಾರ್ಗಸೂಚಿಯನ್ವಯ ರೈತರು ಇಲಾಖೆಯ ಪೂರ್ವಾನುಮತಿ ಪಡೆಯದೇ ಮುಂಗಾರು ಹಂಗಾಮು-2013ರ ಹಂಗಾಮಿನ ಭತ್ತದ ಬೆಳೆ ಕಟಾವು ಮಾಡಲು ಖರೀದಿಸಿರುತ್ತಾರೆ. ಮತ್ತು ಈ ಉಪಕರಣಗಳಿಗೆ ಹೆಚ್ಚಿನ ಸಹಾಯ ಧನ (ರೂ.4.00 ಲಕ್ಷ) ಅವಶ್ಯಕತೆ ಇರುತ್ತದೆ ಎಂದು ತಿಳಿಸಿರುತ್ತೀರಿ. ನವೆಂಬರ್-2013 ಮಾಹೆಯವರೆಗೆ ಈ ಉಪಕರಣಗಳಿಗೆ ಸಹಾಯಕ ಧನ ನೀಡಲು ಇಲಾಖೆ ಅನುಮತಿಸದಿರುವುದರಿಂದ ಅರ್ಜಿಗಳನ್ನು ಸ್ವೀಕೃತಿಗೊಳಿಸಿರುವುದಿಲ್ಲ ಎಂದೂ ಸಹ ತಿಳಿಸಿರುತ್ತೀರಿ. ನವೆಂಬರ್-2013ರ ಮಾಹೆಯಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಅನುದಾನ ಲಭ್ಯತೆ ಸಹ ಕಡಿಮೆ ಇದ್ದು ದಾವಣಗೆರೆ ಜಿಲ್ಲೆಯಲ್ಲಿ ಮಾರ್ಚ್-2014 ರಲ್ಲಿ ರೈತರು "ಇಲಾಖೆ ಮಾರ್ಗಸೂಚಿ ಮೀರಿ ಕಟಾವು ಯಂತ್ರ ಖರೀದಿಸಿದ್ದು, ಸಹಾಯ ಧನ ನೀಡುವ ಯಾವುದೇ ನಿಬಂಧನೆ ಇಲಾಖೆಗೆ ಇರುವುದಿಲ್ಲ" ಎಂದು ಸ್ವೀಕೃತಿ ಪತ್ರ ರೈತರಿಗೆ ನೀಡಿ ರೈತರಿಂದ ಪ್ರಸ್ತಾವನೆ ಸ್ವೀಕರಿಸಲಾಗಿದೆ ಎಂದು ತಿಳಿಸಿರುತ್ತೀರಿ.

ರೈತರಿಗೆ ಕೃಷಿ ಉಪಕರಣಗಳನ್ನು ನೀಡಲು 2013-14ನೇ ಸಾಲಿನಲ್ಲಿ ಇರುವ ಮಾರ್ಗಸೂಚಿಗಳು ಕೆಳಕಂಡಂತೆ ಇರುತ್ತವೆ.

- ಕಂಡಿಕೆ-8ರಲ್ಲಿ ರೈತರು/ಸ್ವಸಹಾಯ ಗುಂಪುಗಳು ಪೂರ್ಣ ಮೊತ್ತವನ್ನು ಪಾವತಿಸಿ ಪಡೆಯಲಿಚ್ಚಿಸಿದ ಸವಲತ್ತನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಮುಖಾಂತರ ಸರಬರಾಜು ಮಾಡುವುದು. ಘಟಕ ಖರೀದಿಸುವ ಮುನ್ನ ಇಲಾಖೆಗೆ ಅರ್ಜಿ ನೀಡುವುದು ಕಡ್ಡಾಯ.
- ಕಂಡಿ-9ರಲ್ಲಿ ಸಹಾಯಧನದಡಿ ಸವಲತ್ತನ್ನು ಪಡೆಯಲಿಚ್ಚಿಸುವ ರೈತರು ನಿಗಧಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ರೈತ ಸಂಪರ್ಕ ಕೇಂದ್ರಕ್ಕೆ ಉಪಕರಣಗಳ/ಟಿಲ್ಲರ್‌ಗಳ ಮಾದರಿಯನ್ನು ನಮೂದಿಸಿ, ಅರ್ಜಿ ಸಲ್ಲಿಸುವುದು. ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥರ ಶಿಫಾರಸ್ಸಿನೊಂದಿಗೆ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.
- ಕಂಡಿಕೆ-15 ರಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ನಿರ್ವಹಿಸುವ ಜೇಷ್ಟತಾ ಪಟ್ಟಿ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಸಹಾಯ ಧನ ಪಾವತಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವುದು. ಹಾಗೂ ಸರ್ಕಾರದ ಸುತ್ತೋಲೆಯಂತೆ ಪಜಾ/ಪಂ/ಹಿ.ವ/ಮಹಿಳೆಯರಿಗೆ ಆದ್ಯತೆ ನೀಡುವುದು ಎಂದು ಸೂಚಿಸಲಾಗಿರುತ್ತದೆ.

ಮೇಲ್ಕಂಡ ಇಲಾಖಾ ಮಾರ್ಗಸೂಚನೆಗಳು ಸ್ಪಷ್ಟವಾಗಿ ಇದ್ದರೂ ಸಹ ನೀವು ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿ ನಿಯಮಬಾಹಿರವಾಗಿ ರೂ.148.00 ಲಕ್ಷ ಹೆಚ್ಚುವರಿ ಅನುದಾನವನ್ನು ಕೋರಿರುವುದು ದ್ವಂದ್ವವಾಗಿರುತ್ತದೆ. ಹಾಗೂ ನೀವು ಇಲಾಖೆಗೆ ಹೆಚ್ಚುವರಿ ಅನುದಾನವನ್ನು ಕೋರಿರುವುದು ಯಾವ ಮಾನದಂಡದ ಆಧಾರದ ಮೇಲೆ ಕೋರಲಾಗಿದೆ ಎಂದು ಸ್ಪಷ್ಟವಾಗಿ ತಿಳಿದು ಬರುತ್ತಿಲ್ಲ.

ಈ ರೀತಿಯ ನಿಮ್ಮ ವರ್ತನೆ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿ-1966ರ ನಿಯಮ 3ನ್ನು ಉಲ್ಲಂಘಿಸಿರುತ್ತೀರಿ. ಈ ರೀತಿಯ ನಿಮ್ಮ ವರ್ತನೆಯ ಬಗ್ಗೆ ಹಾಗೂ ನಿಮ್ಮ ದ್ವಂದ್ವ ನಿಲುವಿನ ಬಗ್ಗೆ ನಿಮ್ಮನ್ನು ನಿಲಂಭನೆಲ್ಲಿಡಲು ಸರ್ಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎಂಬುದಕ್ಕೆ ನಿಮ್ಮ ಸ್ಪಷ್ಟವಾದ ಲಿಖಿತ ಸಮಜಾಯಿಷಿಯನ್ನು ಈ ಕಾರಣ ಕೇಳುವ ನೋಟೀಸು ದಿನಾಂಕದಿಂದ "3" ದಿನಗಳೊಳಗಾಗಿ ಇಲಾಖೆಗೆ ಸಲ್ಲಿಸಲು ಸೂಚಿಸಿದೆ.

28.3.15.

ಕೃಷಿ ಆಯುಕ್ತರು.

RP AD

ಇವರಿಗೆ:

ಶ್ರೀ.ವಿ.ಸದಾಶಿವ,
ಜಂಟಿ ಕೃಷಿ ನಿರ್ದೇಶಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ

O/C

E:\Hoogar\letter.doc